**ದಿನಾಂಕ 6.07.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಟಿ.ಸಿ.ಜಿ. ಪ್ರತಿವಾದಿಯ ಪರ ವಕೀಲರಿಂದಃ-**

ನನ್ನ ಗಂಡ ಮತ್ತು ನನ್ನ ಮಗ ಹೇಮಂತ್ ಕುಮಾರ್ ರವರು ಮಾಡುವ ಚಿಕ್ಕ ಸಹಿಗಳನ್ನು ನೋಡಿ ಗುರುತಿಸುತ್ತೀರಾ ಎಂದರೆ ಅವರು ಚಿಕ್ಕ ಸಹಿಗಳನ್ನು ಮಾಡುವುದಿಲ್ಲ. ನನಗೆ ಈಗ ತೋರಿಸಿದ ಒಂದು ಚಿಕ್ಕ ಪುಸ್ತಕದಲ್ಲಿ ನನ್ನ ಗಂಡ ಪ್ರತಿವಾದಿಯಿಂದ ಹಣವನ್ನು ಪಡೆದ ಬಗ್ಗೆ ಚಿಕ್ಕ ಸಹಿಗಳನ್ನು ಹಾಕಿರುವುದು ಮತ್ತು ಅದೇ ರೀತಿ ನನ್ನ ಮಗ ಹೇಮಂತ್ ಕುಮಾರ್ ರವರು ಕೂಡ ಪ್ರತಿವಾದಿಯಿಂದ ಹಣವನ್ನು ಪಡೆದ ಬಗ್ಗೆ ಚಿಕ್ಕ ಸಹಿಗಳನ್ನು ಹಾಕಿರುವುದು ಕಂಡು ಬರುತ್ತಿದೆ ಎಂದರೆ ಸರಿಯಲ್ಲ. ನನ್ನ ಗಂಡ ಮತ್ತು ಮಗ ಸೇರಿ ಪ್ರತಿವಾದಿಗೆ ರೂ.6,43,000/- ಹಣವನ್ನು ಪಾವತಿಸಿರುವುದು ಸದರಿ ಪುಸ್ತಕದಲ್ಲಿ ಕಂಡು ಬರುತ್ತಿದೆ ಎಂದರೆ ಸರಿಯಲ್ಲ.

ನನ್ನ ಗಂಡ ಸಹಿ ಮಾಡಿರುವ ವ್ಯವಹಾರದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ತೊಂದರೆ ಇಲ್ಲ. ಆ ದಾಖಲೆಗಳಿಗೆ ನನ್ನ ಮಗ ಸಹಿಗಳನ್ನು ಮಾಡಿಲ್ಲ. ಸದರಿ ರೂ.6,43,000/- ಹಣವನ್ನು ಪ್ರತಿವಾದಿಯಿಂದ ಅಸಲು ಮತ್ತು ಬಡ್ಡಿಗೆ ನನ್ನ ಗಂಡ ಮತ್ತು ಮಗ ಪಡೆದಿದ್ದರೂ ಕೂಡ ದುರ್ಲಾಭ ಪಡೆಯಲು ಸದರಿ ಪುಸ್ತಕದಲ್ಲಿರುವ ಸಹಿಗಳು ನನ್ನ ಗಂಡ ಮತ್ತು ಮಗನ ಸಹಿಗಳು ಅಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮಗ ಚಿಕ್ಕ ಸಹಿಯನ್ನು ಮಾಡುತ್ತಾರೆ ಎಂದರೆ ಸರಿಯಲ್ಲ. ನನ್ನ ಮಗ ಮತ್ತು ಗಂಡನ ಚಿಕ್ಕ ಸಹಿಗಳ ಬಗ್ಗೆ ನನಗೆ ಸಂಪೂರ್ಣ ತಿಳುವಳಿಕೆ ಇದ್ದರೂ ಕೂಡ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ.2 ಮತ್ತು 3 ರ ದಾಖಲೆಗಳನ್ನು ಯಾರು ಸಿದ್ಧಪಡಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ, ಪ್ರತಿವಾದಿಯೇ ಸಿದ್ಧಪಡಿಸಿಕೊಂಡು ತಂದಿದ್ದರು. ನಿಪಿ.3 ಅನ್ನು ಕೆ.ಜಿ.ವಿಠಲ್ ರಾವ್ ರವರು ನನ್ನ ಹೆಸರಿಗೆ ಸಿದ್ಧಪಡಿಸಿದ್ದರು. ಅದರಲ್ಲಿ ಅವರ ಸಹಿ ಇಲ್ಲ ಎಂದರೆ ಸರಿ. ಅವರ ವಿಳಾಸ ಎಲ್ಲಿದೆ ಎಂದು ನನ್ನ ಮಗನಿಗೆ ಗೊತ್ತಿದೆ. ನಿಪಿ.2 ಮತ್ತು 3 ರಲ್ಲಿ ಪ್ರತಿವಾದಿಯ ಸಹಿಗಳು ಇಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಮಗ ಹಾಗೂ ಸಾಕ್ಷಿದಾರರು ಶ್ಯಾಮಿಲ್ ಆಗಿ ಪ್ರತಿವಾದಿಯ ಸಹಿಗಳನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

ನಿಪಿ.2 ಮತ್ತು 3 ರಲ್ಲಿ ಇರುವ ಸಾಕ್ಷಿದಾರರು ನಮ್ಮ ಪೆಪ್ಸಿ ಯಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿಯಲ್ಲ. ನಿಪಿ.1 ಕಾಲಾವಧಿಯಿಂದ ಮೀರಿರುವುದರಿಂದ ಪ್ರತಿವಾದಿಯಿಂದ ದುರ್ಲಾಭ ಪಡೆಯಲು ನಿಪಿ.2 ಮತ್ತು 3 ಅನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

ಈ ಪ್ರಕರಣವನ್ನು ದಾಖಲಿಸುವ ಪೂರ್ವದಲ್ಲಿ ನಾನು ನಿಪಿ.4 ರಂತೆ ನನ್ನ ವಕೀಲರ ಮೂಲಕ ಪ್ರತಿವಾದಿಗೆ ನೋಟೀಸನ್ನು ನೀಡಿದ್ದು, ಅವರು ನಮ್ಮನ್ನು ಭೇಟಿಯಾಗಿ ನನ್ನ ಗಂಡನಿಗೆ ಸಾಲದ ಅಸಲು ಮತ್ತು ಬಡ್ಡಿಯನ್ನು ಮರುಪಾವತಿಸಿರುವುದಾಗಿ ಈ ಮೇಲೆ ಹೇಳಿದ ಚಿಕ್ಕ ಪುಸ್ತಕವನ್ನು ನಮಗೆ ತೋರಿಸಿದಾಗ ಸದರಿ ಕ್ರಯದ ಕರಾರು ಪತ್ರವನ್ನು

ರದ್ದು ಪಡಿಸುವುದಾಗಿ ನಾವು ಅವರಿಗೆ ಭರವಸೆ ನೀಡಿದ್ದೆವು ಎಂದರೆ ಸರಿಯಲ್ಲ. ಆ ರೀತಿ ಭರವಸೆ ನೀಡಿದ್ದರಿಂದ ಪ್ರತಿವಾದಿಯು ನಮ್ಮ ನೋಟೀಸಿಗೆ ಉತ್ತರವನ್ನು ನೀಡಿಲ್ಲ ಎಂದರೆ ಸರಿಯಲ್ಲ. ಹಾಗಾಗಿ ದಾವಾದಲ್ಲಿ ಕೇಳಿರುವ ಪರಿಹಾರವನ್ನು ಪ್ರತಿವಾದಿಯು ನಮಗೆ ನೀಡಲು ಬಾಧ್ಯಸ್ಥನಲ್ಲ ಎಂದರೆ ಸರಿಯಲ್ಲ.

ನಿಪಿ.2 ರ ದಾಖಲೆಯನ್ನು ಪ್ರತಿವಾದಿಯೇ ಸಿದ್ಧಪಡಿಸಿಕೊಂಡು ಬಂದಿದ್ದರು ಎಂದು ನಮ್ಮ ವಾದ ಪತ್ರದಲ್ಲಿ ಹೇಳಿಲ್ಲ. ಅದೇ ರೀತಿ ನಿಪಿ.3 ರ ದಾಖಲೆಯನ್ನು ನನ್ನ ಮಗ ಮತ್ತು ಪ್ರತಿವಾದಿ ಸೇರಿ ಸಿದ್ಧಪಡಿಸಿಕೊಂಡು ಬಂದಿದ್ದರು ಎಂದು ನಮ್ಮ ವಾದ ಪತ್ರದಲ್ಲಿ ಹೇಳಿಲ್ಲ. ಹಾಗಾಗಿ ಆ ದಾಖಲೆಗಳ ಬಗ್ಗೆ ನನ್ನ ಸಾಕ್ಷ್ಯದಲ್ಲಿ ಮೊದಲ ಬಾರಿಗೆ ಹೇಳುತ್ತಿದ್ದೇನೆ ಎಂದರೆ ಸರಿ. ಹಾಗಾಗಿ ಆ ದಾಖಲೆಗಳ ಬಗ್ಗೆ ನಾನು ನನ್ನ ವಕೀಲರಿಗೆ ತಿಳಿಸದೇ ಸತ್ಯಾಂಶವನ್ನು ಮರೆಮಾಚಿದ್ದೇವೆ ಎಂದರೆ ಸರಿಯಲ್ಲ, ಆ ದಾಖಲೆಗಳನ್ನು ನಾವು ವಕೀಲರಿಗೆ ನೀಡಿದ್ದೆವು. ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿಯ ಬೆಲೆಬಾಳುವ ಆಸ್ತಿಯನ್ನು ಕಬಳಿಸುವ ಸಲುವಾಗಿ ಸುಳ್ಳು ದಾವಾ ದಾಖಲಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಹನುಮಂತ ಜಿ.ಹೆಚ್.)**

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**

**ಭದ್ರಾವತಿ**